# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 221 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18.08.2026 |
| ಉತ್ತರಿಸುವ ಸಚಿವರು | : | ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾದಿ ಮತ್ತು ಗ್ರಾಮೋದ್ಯೋಗ ಸಂಸ್ಥೆಗಳ ಕಾರ್ಯಕ್ಷಮತೆ ಹಾಗೂ ಕಾರ್ಯ ಸಾಧ್ಯತೆಯನ್ನು (ಉತ್ಪಾದನೆ, ಮಾರಾಟ ಮತ್ತು ಉದ್ಯೋಗ ಸೃಷ್ಟಿ) ಸರ್ಕಾರ ಪರಿಶೀಲಿಸಿದೆಯೆ: (ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ನೀಡುವುದು) | ಮೈಸೂರು ಜಿಲ್ಲೆಯಲ್ಲಿ ಪ್ರಸ್ತುತ ಯಾವುದೇ ನೊಂದಾಯಿತ ಖಾದಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ.<br>ಆದರೆ, ಬದನವಾಳು, ಕಿರಗುಂದ ಗ್ರಾಮದಲ್ಲಿ ಖಾದಿ ಗ್ರಾಮೋದ್ಯೋಗ ಸಂಘ, ಹೊಳೆಸರಸೀಪುರ ರವರಿಗೆ ಸೇರಿದ ಉತ್ಪಾದನಾ ಕೇಂದ್ರಗಳು ಮತ್ತು ತಗಡೂರು ಗ್ರಾಮದಲ್ಲಿ ಕರ್ನಾಟಕ ಸರ್ವೋದಯ ಸಂಘ, ಬೆಂಗಳೂರು ರವರ ಉತ್ಪಾದನಾ ಕೇಂದ್ರಗಳು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತವೆ. |
| ಆ) | ಮೈಸೂರು ಜಿಲ್ಲೆಯಲ್ಲಿ ಪ್ರಸ್ತುತ ಸಕ್ರಿಯವಾಗಿರುವ ಖಾದಿ ಸಂಸ್ಥೆಗಳು, ನೋಂದಾಯಿತ ನೂಲುಗಾರರು, ನೇಕಾರರು ಮತ್ತು ಗ್ರಾಮೋದ್ಯೋಗ ಕುಶಲಕರ್ಮಿಗಳ ಸಂಖ್ಯೆ ಎಷ್ಟು ಹಾಗೂ ಅವರಿಗೆ ಒದಗಿಸಲಾಗಿರುವ ಸೌರ ಚರಕ, ಸುಧಾರಿತ ಮಗ್ಗಗಳು ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರಗಳ (CFC) ಮೂಲಸೌಕರ್ಯಗಳ ಮಾಹಿತಿ ಒದಗಿಸುವುದು | ಮೈಸೂರು ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಯಾವುದೇ ಖಾದಿ ಸಂಸ್ಥೆಗಳು ಇರುವುದಿಲ್ಲ. ಆದ್ದರಿಂದ ನೂಲುಗಾರರು/ ನೇಕಾರರು ಮತ್ತು ಗ್ರಾಮೋದ್ಯೋಗ ಕುಶಲಕರ್ಮಿಗಳ ಸಂಖ್ಯೆ ಲಭ್ಯವಿರುವುದಿಲ್ಲ ಮತ್ತು ಅವರುಗಳಿಗೆ ಈವರೆವಿಗೂ ಯಾವುದೇ ಸೌರಚರಕ, ಸುಧಾರಿತ ಮಗ್ಗಗಳು ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು - ಮೂಲಭೂತ ಸೌಕರ್ಯಗಳನ್ನು ಒದಗಿಸಿರುವುದಿಲ್ಲ. |
| ಇ) | ಕಳೆದ ಮೂರು ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಖಾದಿ ಅಭಿವೃದ್ಧಿ ಮಾರುಕಟ್ಟೆ ವಿಸ್ತರಣೆ ಮತ್ತು (ಮೈಸೂರು ದಸರಾ ಸೇರಿದಂತೆ) ನಗರ ಚಿಲ್ಲರೆ ವ್ಯಾಪಾರದ ಪ್ರದರ್ಶನಗಳಿಗೆ ಹಂಚಿಕೆಯಾದ, ಬಿಡುಗಡೆಯಾದ ಮತ್ತು ಬಳಸಲಾದ ಯೋಜನಾವಾರು ಅನುದಾನವೆಷ್ಟು; (ವಿವರ ಒದಗಿಸುವುದು.) | ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಮೈಸೂರು ಜಿಲ್ಲೆಗೆ ಖಾದಿ ಅಭಿವೃದ್ಧಿ ಮಾರುಕಟ್ಟೆ ವಿಸ್ತರಣೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಯಾವುದೇ ಚಿಲ್ಲರೆ ವ್ಯಾಪಾರದ ಪ್ರದರ್ಶನಗಳಿಗೆ ಯಾವುದೇ ಅನುದಾನ ಹಂಚಿಕೆಯಾಗಿರುವುದಿಲ್ಲ. |
| ಈ) | ಮೈಸೂರು ಜಿಲ್ಲೆಯ ಖಾದಿ ಕುಶಲಕರ್ಮಿಗಳ ಆದಾಯ ಹೆಚ್ಚಿಸಲು ಉತ್ಪನ್ನಗಳನ್ನು<br>ಇ-ಕಾಮರ್ಸ್ ವೇದಿಕೆಗಳಿಗೆ ಜೋಡಿಸಲು, | ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಇ-ಕಾಮರ್ಸ್ ವೇದಿಕೆ ಅಭಿವೃದ್ಧಿ ಪಡಿಸುತ್ತಿದ್ದು, ಪ್ರತ್ಯೇಕವಾಗಿ ಮೈಸೂರು ಜಿಲ್ಲೆಗೆ ಸೀಮಿತಗೊಳಿಸಿದ ಯಾವುದೇ ವೇದಿಕೆ ಇರುವುದಿಲ್ಲ. ಖಾದಿ |

| | | |
|---|---|---|
| | 'ಖಾದಿ ಮಾರ್ಕ್' ಬ್ರ್ಯಾಂಡಿಂಗ್ ವಿಸ್ತರಿಸಲು ಮತ್ತು ಪ್ರವಾಸಿಗರನ್ನು ಆಕರ್ಷಿಸುವ ಚಿಲ್ಲರೆ ಮಾರಾಟ ಮಳಿಗೆಗಳನ್ನು ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಮಾರ್ಕ್ ಮತ್ತು ಖಾದಿ ಬ್ರ್ಯಾಂಡಿಂಗ್ ವಿಸ್ತರಿಸಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಪ್ರಸ್ತುತ ಪ್ರವಾಸಿಗರನ್ನು ಆಕರ್ಷಿಸಲು ಚಿಲ್ಲರೆ ಮಾರಾಟ ಮಳಿಗೆಗಳನ್ನು ಸ್ಥಾಪಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಿಐ 43 ಎಸ್‌ಎಲ್‌ವಿ 2026

**(ವಿಜಯಾನಂದ ಕಾಶಪ್ಪನವರ್)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ
ಸಚಿವರು.